**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 344/2014**

**ಸಾಕ್ಷಿಗೆ ದಿನಾಂಕ 17.11.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಭಾಸ್ಕರ್ | ಪಿ.ಡಬ್ಲ್ಯೂ– 9 |
| ತಂದೆಯ/ಗಂಡನ ಹೆಸರು | : | ಚೆಲುವ | ಸಿ.ಡಬ್ಲ್ಯೂ– 13 |
| ವಯಸ್ಸು | : | 55 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಸೊಳ್ಳೆಪುರ ಹಾಡಿ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿಯು ನನಗೆ ಪರಿಚಯ ಇರುವುದಿಲ್ಲ. ಚಾಸಾ 1 ರಿಂದ 3 ರವರ ಪರಿಚಯ ಇರುತ್ತದೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಬೇರೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2005-06 ನೇ ಸಾಲಿನಲ್ಲಿ ಸಂಘದ ನಿರ್ದೇಶಕನಾಗಿದ್ದ ಸಮಯದಲ್ಲಿ ಸಂಘದ ಮಾರಾಟದ ಗುಮಾಸ್ತರಾಗಿದ್ದ ನಿಂಗರಾಜು ರವರು ವಿವಿದೋದ್ದೇಶ ಸಹಕಾರ ಸಂಘದಲ್ಲಿ ಗೊಂದು, ಜೇನು ಮತ್ತು ಮರದ ಪಾಚಿಯನ್ನು ಸಂಗ್ರಹಿಸಿದ್ದು ಇವುಗಳನ್ನು ಮಾರಾಟ ಮಾಡುವ ಸಲುವಾಗಿ ಆಡಳಿತ ಮಂಡಳಿಯ ಸಬೆಯಲ್‍ಲ್ ನಿಗಧಿತ ಬೆಲೆಯನ್ನು ನಿರ್ಣಯಿಸಿದ್ದು, ಆದರೆ ಗುಮಾಸ್ತರಾಗಿದ್ದ ನಿಂಗರಾಜು ರವರು ನಿರ್ಣಯಿಸಿದ ಬಲೆಗಿಂತ ಅತೀ ಕಡಿಮೆ ಬೆಲೆಗೆ ಮಾರಾಟ ಮಾಡಿ ಒಟ್ಟು ರೂ 9,16,993/- ಗಳನ್ನು ಸಂಘದ ಗಮನಕ್ಕೆ ತಾರದೆ ದಾಖಲಾತಿಗಳನ್ನು ನಮೂದಿಸದೆ ಒಟ್ಟು ರೂ.9,22,243/- ಗಳನ್ನು ತನ್ನ ಸ್ವಂತಕ್ಕೆ ದೂರುಪಯೋಗ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು 2006-07 ನೇ ಸಾಲಿನಲ್‍ಲ್ ನಿರ್ದೇಶಕರಾಗಿದ್ದಾಗ ಪ್ರಭಾರ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಹೆಚ್ ಡಿ ಕುಮಾರ ಸ್ವಾಮಿಯವರು ಸಹಕಾರ ಸಂಘದಲ್ಲಿ ಸಂಗ್ರಹಿಸಿದ್ದ ಗೋಂದು ಮತ್ತು ಜೇನನ್ನು ಮತ್ತು ಒಳ ಪುಡಿಯನ್ನು ಆಡಳಿತ ಮಂಡಳಿಯಲ್ಲಿ ನಿರ್ಣಯಿಸಿದ್ದಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿ ಒಟ್ಟು ರೂ1,61,341/- ಗಳನ್ನು ಸ್ವಂತಕ್ಕೆ ದೂರುಪಯೋಗ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಈಗ ಮೇಲೆ ಓದಿ ಹೇಳಿದಂತೆ ದಿಃ 27.08.2013 ರಂದು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ 31 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ನನಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಸಹ ಆರೋಪಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು   ಆರೋಪಿ ಪರ ವಕೀಲರಿಂದಃ ಇಲ್ಲ</u>**

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ